# ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರು ಮಾಡಿದ ಗುರುಸೇವೆ ಮತ್ತು ಅವರ ಶಿಷ್ಯತ್ವ

## ಪ್ರಸ್ತುತ ಗ್ರಂಥದ ಅನುಕ್ರಮಣಿಕೆ

(ಅಧ್ಯಾಯದಲ್ಲಿನ ಕೆಲವು ವೈಶಿಷ್ಟ್ಯಪೂರ್ಣ ಅಂಶಗಳನ್ನು ಕೆಳಗೆ ಕೊಡಲಾಗಿದೆ.)


**ಅಧ್ಯಾಯ ೧. ಡಾ. ಆಠವಲೆಯವರು ಮಾಡಿದ ಆದರ್ಶ ಗುರುಸೇವೆ ೧೫**

೧ ಅ. ಡಾ. ಆಠವಲೆಯವರು ಗುರುಗಳ ಆಶ್ರಮದಲ್ಲಿ ಮಾಡಿದ ಸೇವೆ ೧೫

೧ ಆ. ತಮ್ಮ ಮನೆಯಲ್ಲಿ ಗುರುಗಳ ವಾಸ್ತವ್ಯವಿದ್ದಾಗ ಡಾ. ಆಠವಲೆಯವರು ಮಾಡಿದ ಗುರುಸೇವೆ ೧೬

೧ ಇ. ಡಾ. ಆಠವಲೆಯವರು ಅನುಭವಿಸಿದ ಗುರುಗಳ ಸಗುಣ ಸೇವೆಯ ಮಹತ್ವ ಮತ್ತು ಆ ಸೇವೆಯಲ್ಲಿನ ಕಠಿಣತೆ ೧೮

೧ ಉ. ಸಾಧಕರಿಂದ ಗುರುಸೇವೆ ಮಾಡಿಸಿಕೊಳ್ಳುವುದು ೨೧

೧ ಎ. ಗುರುಗಳ ಬೋಧನೆಯನ್ನು ಎಲ್ಲರಿಗೂ ತಲುಪಿಸುವುದು ೨೩

೧ ಒ. ಪ.ಪೂ. ಬಾಬಾರ ಗುರುಪೂರ್ಣಿಮಾ ಮಹೋತ್ಸವದ ಆಯೋಜನೆ ೨೮

೧ ಓ. ಪ.ಪೂ. ಬಾಬಾರ ಅಮೃತ ಮಹೋತ್ಸವದ ಆಯೋಜನೆ ೨೯

**ಅಧ್ಯಾಯ ೨. ಗುರುಗಳ ಬಗ್ಗೆ ಡಾ. ಆಠವಲೆಯವರ ಭಾವ ೩೭**

೨ ಅ. ‘ಪ.ಪೂ. ಬಾಬಾರವರು ಈಶ್ವರರಾಗಿದ್ದಾರೆ’ ಎಂಬ ಭಾವ ೩೭

೨ ಇ. ‘ಸನಾತನದ ಆಶ್ರಮದಲ್ಲಿ ಪ.ಪೂ. ಬಾಬಾರವರ ಕೃಪೆಯಿಂದ ಚೈತನ್ಯ ಮತ್ತು ಸಾತ್ತ್ವಿಕತೆಯ ಅರಿವಾಗುತ್ತದೆ’ ಎಂದು ಪರಾತ್ಪರ ಗುರು ಡಾಕ್ಟರರು ಹೇಳುವುದು ೩೮

೨ ಊ. ಪರಾತ್ಪರ ಗುರು ಡಾ. ಆಠವಲೆಯವರು ‘ತಮ್ಮ ಸನ್ಮಾನವು ಗುರುಗಳದ್ದೇ ಸನ್ಮಾನವಾಗಿದೆ’ ಎಂದು ತಿಳಿಯುವುದು ೩೮

**ಅಧ್ಯಾಯ ೩. ಪರಾತ್ಪರ ಗುರು ಡಾ. ಆಠವಲೆಯವರ ಶಿಷ್ಯತ್ವ ೪೦**

೩ ಅ. ಗುರುಗಳ ಆಜ್ಞಾಪಾಲನೆಯನ್ನು ಚಾಚೂತಪ್ಪದೇ ಮಾಡುವುದು ೪೦

೩ ಈ. ಪ.ಪೂ. ಬಾಬಾರಿಗೆ ಡಾ. ಆಠವಲೆಯವರ ಮೇಲಿರುವ ವಿಶ್ವಾಸ ೪೩

೩ ಉ. ಗುರುಗಳಿಗೆ ಇಚ್ಛಿತ ಅರ್ಪಣೆಯನ್ನು ಕೊಡಲು ಆಗದಿರುವಾಗ ಖೇದವೆನಿಸುವುದು ೪೩

೩ ಎ. ಪ.ಪೂ. ಡಾಕ್ಟರರ ಸತ್ಸಂಗದಿಂದ ಇತರರಿಗೆ ಲಾಭವಾಗುವುದು ಆದರೆ ಅದರಿಂದ ಅವರ ಅಹಂ ಹೆಚ್ಚಾಗದಿರುವುದು ೪೪

೩ ಐ. 'ಭವಿಷ್ಯದಲ್ಲಿ ಗೋವಾದಲ್ಲಿ 'ವಿಶ್ವದೀಪ ನಿರ್ಮಾಣವಾಗುವುದು' ಎಂಬ ಗುರುವಾಣಿ ಸತ್ಯಕ್ಕೆ ತರುವ ಪರಾತ್ಪರ ಗುರು ಡಾಕ್ಟರರು ! ೪೫

೩ ಒ. ಗುರುಪತ್ನಿ ಆಶ್ರಮಕ್ಕೆ ಬಂದಾಗ ಅವರ ಚರಣಗಳ ಮೇಲೆ ತಲೆಯನ್ನಿಟ್ಟು ನಮಸ್ಕಾರ ಮಾಡುವುದು ೪೫

೩ ಅಂ. 'ತಮ್ಮ ಪಾದುಕೆಗಳು ಗುರುಗಳ ಪಾದುಕೆಗಳೇ ಆಗಿವೆ' ಎಂಬ ಭಾವ ೪೭

೩ ಖ. 'ಪರಾತ್ಪರ ಗುರು' ಪದವಿಯಲ್ಲಿದ್ದೂ ಸತತ ಶಿಷ್ಯಭಾವದಲ್ಲಿರುವುದು ೪೮

**ಅಧ್ಯಾಯ ೪. ಗುರುಗಳು ಡಾ. ಆಠವಲೆಯವರ ಬಗ್ಗೆ ತೆಗೆದುಕೊಂಡ ಕಾಳಜಿ ೫೨**

೪ ಇ. ಗುರುಗಳು ಶಿಷ್ಯನ ಸಾಲದ ಹೊಣೆ ಹೊರುವುದು ೫೨

೪ ಎ. ಡಾ. ಆಠವಲೆಯವರ ರಕ್ಷಣೆ ಮಾಡುವುದರ ಭರವಸೆಯ ಮಾತು ೫೫

**ಅಧ್ಯಾಯ ೫. ಡಾ. ಆಠವಲೆಯವರಿಗೆ ಗುರುಗಳ ಭಕ್ತರು ಮತ್ತು ಸಾಧಕರ ಮೇಲೆ ಇರುವ ಪ್ರೀತಿ ೫೭**

೫ ಅ. ಭಕ್ತರ ಅನುಕೂಲಕ್ಕಾಗಿ ಸ್ವತಃ ಜನದಟ್ಟಣೆಯಲ್ಲಿ ಮಲಗುವುದು ೫೭

೫ ಊ. ಸನಾತನ ಆಶ್ರಮಕ್ಕೆ ಬರುವ ಭಕ್ತರ ಆದರಾತಿಥ್ಯ ಮಾಡುವುದು ೫೮

**ಅಧ್ಯಾಯ ೬. ಗುರುಗಳೊಂದಿಗೆ ಡಾ. ಆಠವಲೆಯವರ ಏಕರೂಪತೆ ೫೯**

೬ ಅ. 'ಯಾವುದು ನನ್ನದಾಗಿದೆಯೋ, ಅದು ನಿಮ್ಮದಾಗಿದೆ ಮತ್ತು ಅದನ್ನು ಬಳಸುವುದು ನಿಮ್ಮ ಅಧಿಕಾರವೇ ಆಗಿದೆ' ಎಂದು ಪ.ಪೂ. ಭಕ್ತರಾಜ ಮಹಾರಾಜರು ಹೇಳುವುದು ೫೯

೬ ಆ. ಡಾ. ಆಠವಲೆಯವರಿಗೆ 'ಗುರುಗಳಿಗೆ ಏನು ಬೇಕು ?' ಎಂಬುದು ಒಳಗಿನಿಂದಲೇ ಅರಿವಾಗುವುದು ೫೯

೬ ಇ. ಪ.ಪೂ. ಬಾಬಾರವರು ದೇಹತ್ಯಾಗದ ದಿನ 'ಡಾಕ್ಟರ್ ಮತ್ತು ನಾನು ಒಂದೇ ಆಗಿದ್ದೇವೆ' ಎಂದು ಸಾಧಕಿಗೆ ಕನಸಿನಲ್ಲಿ ಹೇಳುವುದು ೫೯

**ಅಧ್ಯಾಯ ೭. ಗುರುಗಳ 'ಭಜನೆ, ಸಂಚಾರ ಮತ್ತು ಅನ್ನಸಂತರ್ಪಣೆ'ಯ ತ್ರಿಸೂತ್ರವನ್ನು ಕೃತಿಯಲ್ಲಿ ತರುವ ಡಾ. ಆಠವಲೆ ! ೬೧**

## ವಿಷಯಸೂಚಿಯಲ್ಲಿನ ಕ್ರಮಾಂಕ ೩

### ಗ್ರಂಥದ ಮನೋಗತ

'ಶಿಷ್ಯ ಡಾ. ಜಯಂತ ಆಠವಲೆಯವರ ಗುರುಗಳಾದ ಪ.ಪೂ. ಭಕ್ತರಾಜ ಮಹಾರಾಜರು (ಪ.ಪೂ. ಬಾಬಾ) ಯಾವಾಗಲೂ, 'ಸಂತರನ್ನು ದೋಚಲು (ಸಂತರಿಂದ ಜ್ಞಾನವನ್ನು ಪಡೆಯಲು) ಎರಡು ವಿಷಯಗಳಿವೆ – ನಾಮ ಮತ್ತು ಸೇವೆ !' ಎಂದು ಹೇಳುತ್ತಿದ್ದರು. ಡಾ. ಆಠವಲೆಯವರು ಗುರುಗಳಿಂದ ಈ ಎರಡು ವಿಷಯಗಳ ಉಪಯೋಗವನ್ನು ಯಥೇಚ್ಛವಾಗಿ ಮಾಡಿಕೊಂಡರು; ಏಕೆಂದರೆ ಗುರುಗಳ ಸಹವಾಸದಲ್ಲಿ ಅವರ ನಾಮಜಪ ಅಖಂಡವಾಗಿ ನಡೆಯುತ್ತಿತ್ತು ಮತ್ತು 'ನೇಮಲೇ ಯಾ ಚಿತ್ತಾ ತುಝ್ಯಾ ಸೇವೆ ನಾಥಾ । ನುರೆ ಕಾರ್ಯ ಆತಾ ಆಣಿಕ ತೆ ॥' (ಅರ್ಥ : ನಾಥಾ, ಈ ಚಿತ್ತವು ನಿನ್ನ ಸೇವೆಯಲ್ಲಿ ಮಗ್ನವಾಗಿದೆ, ಇನ್ನು ಬೇರೆ ಕಾರ್ಯವೇನೂ ಬೇಡ.) ಎಂಬಂತೆ ಅವರ ವೃತ್ತಿಯಾಗಿತ್ತು ! ಅವರು ಗುರುಚರಣಗಳಲ್ಲಿ ತನು-ಮನ ಮತ್ತು ಧನವನ್ನು ಅರ್ಪಿಸಿ ಪರಿಪೂರ್ಣ ಸೇವೆಯನ್ನು ಮಾಡಿದರು; ಆದ್ದರಿಂದಲೇ ಗುರುಗಳೂ ಅವರಿಗೆ 'ಡಾಕ್ಟರ್, ನಾನು ನಿಮಗೆ ಜ್ಞಾನ, ಭಕ್ತಿ ಮತ್ತು ವೈರಾಗ್ಯವನ್ನು ನೀಡಿದೆ !' ಎಂದು ಹೇಳಿದರು.

ಡಾ. ಆಠವಲೆಯವರು ಗುರುಗಳ ಬಳಿ ಹೋದಾಗ ಅಲ್ಲಿನ ಶೌಚಾಲಯಗಳ ಸ್ವಚ್ಛತೆ ಮಾಡುವುದರಿಂದ ಹಿಡಿದು ಗುರುಗಳ ಪಥ್ಯ-ಅಪಥ್ಯಗಳನ್ನು ನೋಡಿ ಕೊಳ್ಳುವುದರವರೆಗಿನ ಎಲ್ಲ ಸೇವೆಗಳನ್ನು ಹಸಿವು-ಬಾಯಾರಿಕೆಯನ್ನು ಮರೆತು ಮಾಡುತ್ತಿದ್ದರು. ಅವರು ಗುರುಗಳು ಹೇಳಿದ್ದನ್ನು ಕೂಡಲೇ ಮಾಡುತ್ತಿದ್ದರು; ಅಷ್ಟೇ ಅಲ್ಲದೇ, 'ಶ್ರೀ ಗುರುಗಳ ಮನೋಗತವನ್ನರಿತು' ಅನೇಕ ಸೇವೆಗಳನ್ನು ತಾವಾಗಿಯೇ ಯಥಾಯೋಗ್ಯವಾಗಿ ಮಾಡುತ್ತಿದ್ದರು. ಆದುದರಿಂದ ಪ.ಪೂ. ಬಾಬಾರವರಿಗೆ ಅವರು ಯಾವಾಗಲೂ ಜೊತೆಯಲ್ಲಿರಬೇಕಾಗುತ್ತಿತ್ತು. ಗುರುಗಳ ಸೇವೆಯನ್ನು ಮಾಡುವಾಗ ಅವರಲ್ಲಿರುವ ಗುರುಸೇವೆಯ ತಳಮಳ, ಭಾವ, ಪ್ರೀತಿ, ನೇತೃತ್ವ, ವ್ಯಾಪಕತೆ ಇಂತಹ ವಿವಿಧ ಗುಣಗಳ ದರ್ಶನ ಈ ಗ್ರಂಥದಿಂದಾಗುತ್ತದೆ. ಅವರು ಕೇವಲ ತಾವೇ ಗುರುಸೇವೆಯನ್ನು ಮಾಡಲಿಲ್ಲ, ಜೊತೆಗೆ ಇತರ ಸಾಧಕರಿಗೂ ಸೇವೆಯ ಅವಕಾಶವನ್ನು ಮಾಡಿಕೊಟ್ಟರು; ಅಷ್ಟೇ ಅಲ್ಲದೇ, ಸೇವೆಯ ಮಾಧ್ಯಮದಿಂದ ಸಾಧಕರನ್ನೂ ತಯಾರಿಸಿದರು. ಶಿಷ್ಯನು ಯಾವಾಗ ತನ್ನ ತನು-ಮನ-ಧನವನ್ನು ಗುರುಗಳಿಗೆ ಅರ್ಪಿಸುತ್ತಾನೆಯೋ, ಆಗ ಅವನ ಒಡೆತನದ ಪ್ರತಿಯೊಂದು ವಸ್ತು, ಅಷ್ಟೇ ಅಲ್ಲ, ಅವನ ಮನಸ್ಸಿನಲ್ಲಿನ ಪ್ರತಿಯೊಂದು ವಿಚಾರವೂ ಗುರುಗಳದ್ದಾಗಿರುತ್ತದೆ.

ಡಾಕ್ಟರರ ಸ್ಥಿತಿಯೂ ಹೀಗೇ ಆಗಿರುತ್ತಿತ್ತು. ಅವರಿಗೆ ತಮ್ಮ ಮನಸ್ಸಿನ ಪ್ರತಿಯೊಂದು ವಿಚಾರವೂ ಪ.ಪೂ. ಬಾಬಾರವರದ್ದೇ ಆಗಿರುವುದರ ಅನುಭವ ಬರುತ್ತಿತ್ತು. ಇದರಿಂದ 'ಡಾಕ್ಟರರ ಶಿಷ್ಯತ್ವ ಎಷ್ಟು ಉಚ್ಚ ಕೋಟಿಯದ್ದಾಗಿತ್ತು' ಎಂಬುದು ಗಮನಕ್ಕೆ ಬರುತ್ತದೆ. ಅವರ ಶಿಷ್ಯತ್ವದ ವಿವಿಧ ಮಾದರಿಯನ್ನು ತೋರಿಸುವ ಈ ಗ್ರಂಥವು ಸಾಧಕರಿಗೆ 'ಆದರ್ಶ ಶಿಷ್ಯ'ರಾಗಲು ಅನರ್ಘ್ಯವಾಗಿದೆ.

ಓರ್ವ ಆದರ್ಶ ಶಿಷ್ಯನೇ ಗುರುಗಳ ಕಾರ್ಯದ ಜವಾಬ್ದಾರಿಯನ್ನು ಪರಿಪೂರ್ಣವಾಗಿ ನಿರ್ವಹಿಸಬಲ್ಲನು. ಪ.ಪೂ. ಬಾಬಾರವರ ಗುರುಪೂರ್ಣಿಮಾ ಮಹೋತ್ಸವ, ಅಮೃತ ಮಹೋತ್ಸವ ಇವುಗಳಂತಹ ದೊಡ್ಡ ದೊಡ್ಡ ಸೇವೆಗಳ ಜವಾಬ್ದಾರಿಯನ್ನು ಡಾಕ್ಟರರು ಎಷ್ಟು ಉತ್ತಮವಾಗಿ ನಿರ್ವಹಿಸಿದರೆಂದರೆ, ಅವೆಲ್ಲ ಸೇವೆಗಳು ಅತ್ಯಂತ ಚೊಕ್ಕಟವಾಗಿ ಆಗುತ್ತಿದ್ದವು. ಗುರುಗಳ ಬೋಧನೆಯನ್ನು ಸಮಷ್ಟಿಯವರೆಗೆ ತಲುಪಿಸುವ ವಿಲಕ್ಷಣ ತಳಮಳ ಮತ್ತು ಅದಕ್ಕಾಗಿ ಎಂತಹದೇ ಕಠಿಣ ಪರಿಶ್ರಮ ಪಡುವ ಡಾಕ್ಟರರ ಜಿದ್ದು ಇದರಿಂದ ಗಮನಕ್ಕೆ ಬರುತ್ತಿತ್ತು. ಆದ್ದರಿಂದ ಪ.ಪೂ. ಬಾಬಾರವರು ಡಾಕ್ಟರರ ಮೇಲೆ ತುಂಬಾ ಪ್ರಸನ್ನರಾಗುತ್ತಿದ್ದರು, ಅವರನ್ನು ಎಲ್ಲರೆದುರು ಪ್ರಶಂಸಿಸುತ್ತಿದ್ದರು ಮತ್ತು ಕಾರ್ಯಕ್ಕಾಗಿ ಅವರಿಗೆ ಆಶೀರ್ವಾದವನ್ನೂ ಕೊಡುತ್ತಿದ್ದರು. ಗುರುಗಳ ಆಶೀರ್ವಾದದಿಂದ ಕಡಿಮೆ ಕಾಲಾವಧಿಯಲ್ಲಿಯೇ ಡಾಕ್ಟರರ ತುಂಬಾ ಆಧ್ಯಾತ್ಮಿಕ ಉನ್ನತಿಯಾಯಿತು ಮತ್ತು ಅವರು ಆರಂಭಿಸಿದ ಅಧ್ಯಾತ್ಮಪ್ರಸಾರ ಕಾರ್ಯದ ಬಳ್ಳಿಯು ಇಂದು ಆಕಾಶಕ್ಕೇ ತಲುಪುತ್ತಿದೆ ! ಇಂತಹ ಶಿಷ್ಯರೂಪದಲ್ಲಿನ ಡಾ. ಆಠವಲೆಯವರ ಈ ಸಾಧನಾಪ್ರವಾಸವು ಎಲ್ಲ ಸಾಧಕರಿಗೂ ಸಾಧನಾಮಾರ್ಗದಲ್ಲಿನ ದೀಪಸ್ತಂಭವೇ ಆಗಿದೆ.

ಇಂದು ಡಾಕ್ಟರರಿಗೆ 'ಸಚ್ಚಿದಾನಂದ ಪರಬ್ರಹ್ಮ' ಎಂಬ ಬಿರುದಿರುವಾಗಲೂ ಅವರು 'ನನಗಂತೂ ಪ.ಪೂ. ಬಾಬಾರವರ ಶಿಷ್ಯನಾಗಿ ಅವರ ಸೇವೆಯನ್ನು ಮಾಡಲು ಪುನಃ ಪುನಃ ಜನ್ಮ ತೆಗೆದುಕೊಳ್ಳಲು ಇಷ್ಟವಾಗುತ್ತದೆ !' ಎಂದು ಹೇಳುತ್ತಾರೆ. 'ಇಂತಹ ಆದರ್ಶ ಗುರುಸೇವಕ ಮತ್ತು ಉತ್ತಮ ಶಿಷ್ಯನ ದರ್ಶನ ಮಾಡಿಸುವ ಈ ಗ್ರಂಥದ ಅಧ್ಯಯನದಿಂದ ತಮ್ಮಲ್ಲೂ ಸೇವಾಭಾವ ಮತ್ತು ಶಿಷ್ಯಭಾವ ಬೇಗನೇ ನಿರ್ಮಾಣವಾಗಿ ಶೀಘ್ರವಾಗಿ ತಮ್ಮ ಆಧ್ಯಾತ್ಮಿಕ ಉನ್ನತಿಯಾಗಲಿ' ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !' – **(ಪೂ.) ಶ್ರೀ. ಸಂದೀಪ ಆಳಶಿ (೨.೯.೨೦೨೨)**

('ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಚರಿತ್ರೆ' ಗ್ರಂಥ ಮಾಲಿಕೆ ಮತ್ತು 'ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಸಾಧನಾಪ್ರವಾಸ' ಉಪಮಾಲಿಕೆಗಳ ಹೆಚ್ಚಿನ ಪರಿಚಯ 'ಸಾಧನಾಪ್ರವಾಸ : ಖಂಡ ೧' ರಲ್ಲಿ ನೀಡಲಾಗಿದೆ.)